# Akashvani : Bangalore
# National Bulletin In Kannada
# 14.07.2024 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**14.07.2024 / 7.35 am**

**<><*<><>*><>**

<u>ಮುಖ್ಯಾಂಶಗಳು</u>

೧. ಕಳೆದ ಮೂರರಿಂದ ನಾಲ್ಕು ವರ್ಷಗಳಲ್ಲಿ ೮ ಕೋಟಿ ಹೊಸ ಉದ್ಯೋಗ ಸೃಷ್ಟಿ- ಪ್ರಧಾನಿ ನರೇಂದ್ರ ಮೋದಿ

೨. ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಕುರಿತು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ

೩. ಝೆಕ್ ರಿಪಬ್ಲಿಕ್‌ನ ಬಾರ್ಬೊರಾ ಕ್ರೆಜ್‌ಸಿಕೋವ ಗೆ ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಕಿರೀಟ

೪. ಟಿ-೨೦ ಕ್ರಿಕೆಟ್; ಜಿಂಬಾಬ್ವೆ ವಿರುದ್ಧ ಭಾರತಕ್ಕೆ ೧೦ ವಿಕೆಟ್ ಗಳ ಭರ್ಜರಿ ಗೆಲುವು

**<><*<><>*><>**

ಕಳೆದ ಮೂರರಿಂದ ನಾಲ್ಕು ವರ್ಷಗಳಲ್ಲಿ ಎಂಟು ಕೋಟಿ ಹೊಸ ಉದ್ಯೋಗಗಳ ಸೃಷ್ಟಿಯು ನಿರುದ್ಯೋಗದ ಬಗ್ಗೆ ನಕಲಿ ಮಾಹಿತಿ ಹರಡುವವರನ್ನು ಮೌನಗೊಳಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಉದ್ಯೋಗ ಅಂಕಿ-ಅಂಶಗಳ ಕುರಿತು ಇತ್ತೀಚಿನ ಆರ್‌ಬಿಐ ವರದಿಯನ್ನು ಉಲ್ಲೇಖಿಸಿದ ಪ್ರಧಾನಿ ನರೇಂದ್ರ ಮೋದಿ, ದೇಶದಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗದ ಅಗತ್ಯವಿದ್ದು, ತಮ್ಮ ಸರ್ಕಾರ ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಮುಂಬೈನ ಗೋರೆಗಾಂವ್ ಉಪನಗರದಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ, ನಕಲಿ ಮಾಹಿತಿ ಹರಡುವವರು ಹೂಡಿಕೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ದೇಶದ ಬೆಳವಣಿಗೆಯ ಶತ್ರುಗಳು ಎಂದು ತಿಳಿಸಿದರು. ಎನ್‌ಡಿಎ ಸರ್ಕಾರವು ಸ್ಥಿರತೆ ಮತ್ತು ಬೆಳವಣಿಗೆಗೆ ಆದ್ಯತೆ ನೀಡುವುದನ್ನು ಮುಂದುವರೆಸಿದ್ದು ಸಣ್ಣ ಹಾಗೂ ದೊಡ್ಡ ಹೂಡಿಕೆದಾರರು ಎನ್‌ಡಿಎಯ ಮೂರನೇ ಅವಧಿಯನ್ನು ಉತ್ಸಾಹದಿಂದ ಸ್ವಾಗತಿಸಿದ್ದಾರೆ ಎಂದು ಪ್ರತಿಪಾದಿಸಿದರು.

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ, ಮಹಾರಾಷ್ಟ್ರದ ಸುಮಾರು ೨೯ ಸಾವಿರದ ೪೦೦ ಕೋಟಿ ರೂಪಾಯಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನಿನ್ನೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದರು. ಥಾಣೆ-ಬೊರಿವಲಿ ನಡುವಿನ ದೂರವನ್ನು ೧೨ ಕಿಲೋಮೀಟರ್‌ಗಳಷ್ಟು ಕಡಿಮೆಗೊಳಿಸುವ ಹಾಗೂ ಸಂಚಾರ ಅವಧಿಯನ್ನು ಸುಮಾರು ೧ ಗಂಟೆಯಷ್ಟು ತಗ್ಗಿಸುವ ೧೬ ಸಾವಿರದ ೬೦೦ ಕೋಟಿ ರೂಪಾಯಿ ವೆಚ್ಚದ ಸುರಂಗ ಯೋಜನೆಗೆ ಪ್ರಧಾನಿಯವರು ಶಿಲಾನ್ಯಾಸ ನೆರವೇರಿಸಿದರು. ಇದಲ್ಲದೆ,

ಉಪನಗರ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ೬ ಸಾವಿರದ ೩೦೦ ಕೋಟಿ ರೂಪಾಯಿ ವೆಚ್ಚದ ಗೋರೆಗಾಂವ್ ಮುಲುಂದು ಸಂಪರ್ಕ ರಸ್ತೆ ಯೋಜನೆಯ ಸುರಂಗ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಿದರು. ಛತ್ರಪತಿ ಶಿವಾಜಿ ರೈಲ್ವೆ ನಿಲ್ದಾಣದ ವಿಸ್ತೃತ ತಂಗುದಾಣ ವೇದಿಕೆಯನ್ನು ಪ್ರಧಾನಮಂತ್ರಿಯವರು ದೇಶದ ಸೇವೆಗೆ ಸಮರ್ಪಿಸಿದರು. ಯುವ ಜನರಲ್ಲಿ ಕೌಶಲ್ಯ ಹೆಚ್ಚಿಸುವ ಹಾಗೂ ಉದ್ಯೋಗಕ್ಕಾಗಿ ತರಬೇತಿ ನೀಡುವ ೫ ಸಾವಿರದ ೬೦೦ ಕೋಟಿ ರೂಪಾಯಿ ಗಾತ್ರದ ಮುಖ್ಯಮಂತ್ರಿ ಯುವ ಕಾರ್ಯ ಪ್ರಶಿಕ್ಷಣ ಯೋಜನೆಗೂ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ, ಮಹಾರಾಷ್ಟ್ರದ ಸುಮಾರು ೨೯ ಸಾವಿರದ ೪೦೦ ಕೋಟಿ ರೂಪಾಯಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನಿನ್ನೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದರು. ಥಾಣೆ-ಬೊರಿವಲಿ ನಡುವಿನ ದೂರವನ್ನು ೧೨ ಕಿಲೋಮೀಟರ್‌ಗಳಷ್ಟು ಕಡಿಮೆಗೊಳಿಸುವ ಹಾಗೂ ಸಂಚಾರ ಅವಧಿಯನ್ನು ಸುಮಾರು ೧ ಗಂಟೆಯಷ್ಟು ತಗ್ಗಿಸುವ ೧೬ ಸಾವಿರದ ೬೦೦ ಕೋಟಿ ರೂಪಾಯಿ ವೆಚ್ಚದ ಸುರಂಗ ಯೋಜನೆಗೆ ಪ್ರಧಾನಿಯವರು ಶಿಲಾನ್ಯಾಸ ನೆರವೇರಿಸಿದರು. ಇದಲ್ಲದೆ, ಉಪನಗರ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ೬ ಸಾವಿರದ ೩೦೦ ಕೋಟಿ ರೂಪಾಯಿ ವೆಚ್ಚದ ಗೋರೆಗಾಂವ್ ಮುಲುಂದು ಸಂಪರ್ಕ ರಸ್ತೆ ಯೋಜನೆಯ ಸುರಂಗ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಿದರು. ಛತ್ರಪತಿ ಶಿವಾಜಿ ರೈಲ್ವೆ ನಿಲ್ದಾಣದ ವಿಸ್ತೃತ ತಂಗುದಾಣ ವೇದಿಕೆಯನ್ನು ಪ್ರಧಾನಮಂತ್ರಿಯವರು ದೇಶದ ಸೇವೆಗೆ ಸಮರ್ಪಿಸಿದರು. ಯುವ ಜನರಲ್ಲಿ ಕೌಶಲ್ಯ ಹೆಚ್ಚಿಸುವ ಹಾಗೂ ಉದ್ಯೋಗಕ್ಕಾಗಿ ತರಬೇತಿ ನೀಡುವ ೫ ಸಾವಿರದ ೬೦೦ ಕೋಟಿ ರೂಪಾಯಿ ಗಾತ್ರದ ಮುಖ್ಯಮಂತ್ರಿ ಯುವ ಕಾರ್ಯ ಪ್ರಶಿಕ್ಷಣ ಯೋಜನೆಗೂ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

**<><*<><>*><>**

ನಾಗರಿಕ ಸ್ನೇಹಿ ಉಪಕ್ರಮಗಳನ್ನು ಉತ್ತೇಜಿಸಲು ಮಾಧ್ಯಮಗಳು ಸರ್ಕಾರವನ್ನು ಬೆಂಬಲಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ನಿನ್ನೆ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ ಟವರ್ಸ್ ಅನ್ನು ಉದ್ಘಾಟಿಸಿದ ನಂತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಪರಿಸರ-ಸಂರಕ್ಷಣಾ ಉಪಕ್ರಮದ 'ಏಕ್ ಪೆಡ್ ಮಾ ಕೆ ನಾಮ್' ಅನ್ನು ಉದಾಹರಣೆಯಾಗಿ ಉಲ್ಲೇಖಿಸಿದ ಪ್ರಧಾನಿ, ಈ ಉಪಕ್ರಮಕ್ಕೆ ಜಾಗತಿಕ ಮಟ್ಟದಲ್ಲಿ ಶ್ಲಾಘನೆ ವ್ಯಕ್ತವಾಗಿದೆ. ಮಾಧ್ಯಮಗಳು ಇದನ್ನು ಸಾಮೂಹಿಕ ಆಂದೋಲನವಾಗಿ ಮಾಡಲು ಸಹಾಯ ಮಾಡಬಹುದು ಎಂದು ಹೇಳಿದರು. ಮುಂದಿನ ೨೫ ವರ್ಷಗಳ ವಿಕಸಿತ ಭಾರತ ಪ್ರಯಾಣದಲ್ಲಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಪಾತ್ರವನ್ನು ಒತ್ತಿಹೇಳಿದ ಪ್ರಧಾನಿ ನರೇಂದ್ರ ಮೋದಿ, ಮಾಧ್ಯಮಗಳು ತಮ್ಮ ಶಕ್ತಿಯ ಬಗ್ಗೆ ಜನರಿಗೆ ಅರಿವು ಮೂಡಿಸುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹೆಚ್ಚಿನ ಮಾಧ್ಯಮ ಸಂಸ್ಥೆಗಳು ಡಿಜಿಟಲ್ ಆವೃತ್ತಿಗಳನ್ನು ಹೊಂದಿರುವುದರಿಂದ, ಅಂತಾರಾಷ್ಟ್ರೀಯ ಭಾಷೆಗಳಲ್ಲಿ ಆವೃತ್ತಿಗಳನ್ನು ತರಲು ಪ್ರಯತ್ನಿಸಬೇಕು. ಆ ಮೂಲಕ ಭಾರತೀಯ ದೃಷ್ಟಿಕೋನವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕು ಎಂದು ಪ್ರಧಾನಿ ಹೇಳಿದರು.

**<><*<><>*><>**

ಕರ್ನಾಟಕ ಈ ಮಾಸಾಂತ್ಯದವರೆಗೆ ತಮಿಳುನಾಡಿಗೆ ನಿತ್ಯ ಒಂದು ಟಿಎಂಸಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ -ಸಿಡಬ್ಲ್ಯುಆರ್‌ಸಿ ಸೂಚನೆ ನೀಡಿರುವ ಹಿನ್ನೆಲೆ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಕ್ಕೆ ಸಂಬಂಧಿಸಿದಂತೆ ಚರ್ಚಿಸಲು ರಾಜ್ಯ ಸರ್ಕಾರ ಇಂದು ಸರ್ವಪಕ್ಷ ಮುಖಂಡರ ಸಭೆ ಆಯೋಜಿಸಿದೆ. ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಗೆ ಸರ್ವಪಕ್ಷಗಳ ಮುಖಂಡರು ಸೇರಿ ರಾಜ್ಯದ ಕೇಂದ್ರ ಸಚಿವರು, ಸಂಸದರು ಹಾಗೂ ಶಾಸಕರನ್ನು ಆಹ್ವಾನಿಸಲಾಗಿದೆ.

<><*<><>*><>

ಭಾರತ, ನವೆಂಬರ್ ತಿಂಗಳಲ್ಲಿ 'ವಿಶ್ವ ಶ್ರಾವ್ಯ ದೃಶ್ಯ ಮನರಂಜನಾ ಶೃಂಗಸಭೆ- ವೇವ್ಸ್' ಆಯೋಜಿಸಿದೆ. ನವೆಂಬರ್ ೨೦ ರಿಂದ ೨೪ರವರೆಗೆ ಗೋವಾದಲ್ಲಿ ಮೊದಲ ವೇವ್ಸ್ ಶೃಂಗಸಭೆ ನಡೆಯಲಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ನವದೆಹಲಿಯಲ್ಲಿ ನಿನ್ನೆ ನಡೆದ ಸಿದ್ಧತಾಸಭೆಯಲ್ಲಿ ಮಾತನಾಡಿ, ಭಾರತದ ಮನರಂಜನಾ ಉದ್ದಿಮೆ ಬೆಳವಣಿಗೆಯಲ್ಲಿ ವೇವ್ಸ್ ಗಮನಾರ್ಹ ಮೈಲುಗಲ್ಲಾಗಿದೆ. ಇದು ಹೆಚ್ಚು ಉದ್ಯೋಗ ಸೃಷ್ಟಿಸುವುದಲ್ಲದೇ, ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರಗಳಲ್ಲಿ ವಿನ್ಯಾಸಾತ್ಮಕ ಬದಲಾವಣೆ ತರಲಿದೆ ಎಂದರು. ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್, ಈ ಶೃಂಗಸಭೆ ಕೌಶಲ್ಯಯುತ ಜನಸಂಪನ್ಮೂಲಕ್ಕೆ ಪ್ರೋತ್ಸಾಹ ನೀಡುವ ವೇದಿಕೆಯಾಗಿದೆ ಎಂದರು. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡಿ, ಭಾರತ ವಿಶ್ವದಲ್ಲೇ ಅತಿ ಹೆಚ್ಚು ಚಲನಚಿತ್ರಗಳನ್ನು ನಿರ್ಮಿಸುತ್ತಿರುವ ದೇಶಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ವೇವ್ಸ್ ಆಯೋಜನೆ ಮಹತ್ವದ ಪಾತ್ರ ನಿರ್ವಹಿಸಲಿದೆ ಎಂದರು.

<><*<><>*><>

ಆದಾಯ ತೆರಿಗೆ ಇಲಾಖೆ, ೨೦೨೪-೨೫ ನೇ ಹಣಕಾಸು ಸಾಲಿಗಾಗಿ ಈ ತಿಂಗಳ ೧೧ರವರೆಗೆ ೬ ಲಕ್ಷದ ೪೫ ಸಾವಿರ ಕೋಟಿ ರೂಪಾಯಿಗೂ ಅಧಿಕ ನೇರ ತೆರಿಗೆ ಸಂಗ್ರಹಿಸಿದೆ. ಇದಲ್ಲದೆ, ೭೦ ಸಾವಿರದ ೯೦೨ ಕೋಟಿ ರೂಪಾಯಿ ರೀಫಂಡ್ ಮಾಡಿದೆ. ನೇರ ತೆರಿಗೆ ಸಂಗ್ರಹದಲ್ಲಿ ಕಾರ್ಪೊರೇಟ್ ಕ್ಷೇತ್ರದ ೨ ಲಕ್ಷ ೬೫ ಸಾವಿರದ ೩೩೬ ಕೋಟಿ ರೂಪಾಯಿ, ವೈಯಕ್ತಿಕ ತೆರಿಗೆಯ ೩ ಲಕ್ಷ ೬೧ ಸಾವಿರದ ೮೬೨ ಕೋಟಿ ರೂಪಾಯಿ ಹಾಗೂ ಇತರ ತೆರಿಗೆಗಳ ೧ ಸಾವಿರದ ೪೨೬ ಕೋಟಿ ರೂಪಾಯಿ ಸೇರಿದೆ. ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಶೇಕಡ ೨೦ರಷ್ಟು ಗಮನಾರ್ಹ ಬೆಳವಣಿಗೆ ಅಂದರೆ, ೫ ಲಕ್ಷದ ೭೪ ಸಾವಿರ ಕೋಟಿ ರೂಪಾಯಷ್ಟು ಹೆಚ್ಚು ತೆರಿಗೆ ಸಂಗ್ರಹಿಸಲಾಗಿದೆ.

<><*<><>*><>

ಯುವ ಜನತೆಯಲ್ಲಿ ತಾಂತ್ರಿಕ ಕೌಶಲ್ಯವನ್ನು ವರ್ಧಿಸುವ ಉದ್ದೇಶದ ಡಿಡಿ ರೋಬೊಕಾನ್ ಇಂಡಿಯಾ-೨೦೨೪ ಸ್ಪರ್ಧೆಗಳು ದೆಹಲಿಯಲ್ಲಿ ನಿನ್ನೆ ಆರಂಭವಾಗಿವೆ. ಪ್ರಸಾರ ಭಾರತಿ ಮತ್ತು ದೆಹಲಿಯ ಐಐಟಿ ಸಂಸ್ಥೆ, ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ವಿವಿಧ ವಿಶ್ವವಿದ್ಯಾಲಯ ಹಾಗೂ ಸಂಸ್ಥೆಗಳ ೭೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಈ ಸ್ಪರ್ಧೆಗಳಲ್ಲಿ ವಿಜೇತವಾಗುವ ತಂಡಗಳು, ವಿಯಟ್ನಾಂನಲ್ಲಿ ನಡೆಯಲಿರುವ

ಅಂತಾರಾಷ್ಟ್ರೀಯ ಏಷ್ಯಾ ಪೆಸಿಫಿಕ್ ಬ್ರಾಡ್‌ಕಾಸ್ಟಿಂಗ್ ಯುನಿಯನ್ ರೋಬೊಕಾನ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿವೆ.

**<><*<><>*><>**

ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನಲ್ಲಿ ಇಂದು ಮತ್ತು ನಾಳೆ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತೆಲಂಗಾಣ, ಮರಾಠವಾಡ ಮತ್ತು ವಿದರ್ಭದಲ್ಲಿ ನಾಳೆ ಭಾರೀ ಮಳೆಯಾಗುವ ಸಾಧ್ಯತೆಯಿದೆ. ನಾಗಾಲ್ಯಾಂಡ್, ಒಡಿಶಾ ಮತ್ತು ಛತ್ತೀಸ್‌ಗಢದಲ್ಲಿ ಇಂದು ಭಾರೀ ಮಳೆಯಾಗಲಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಮಂಗಳವಾರದವರೆಗೆ ಕೊಂಕಣ, ಗೋವಾ, ಮಧ್ಯ ಮಹಾರಾಷ್ಟ್ರದ ಕೆಲ ಪ್ರದೇಶಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಐಎಂಡಿ ಹೇಳಿದೆ.

**<><*<><>*><>**

ಲಂಡನ್‌ನಲ್ಲಿ ನಿನ್ನೆ ನಡೆದ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಫೈನಲ್ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಜ್‌ಸಿಕೋವಾ ಇಟಲಿಯ ಜಾಸ್ಮಿನ್ ಪಯೋಲಿನಿ ಅವರನ್ನು ೬-೨, ೨-೬, ೬-೪ ಸೆಟ್‌ಗಳಿಂದ ಸೋಲಿಸಿ ತಮ್ಮ ಚೊಚ್ಚಲ ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಇಂದು ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರೊಂದಿಗೆ ಪ್ರಶಸ್ತಿಗಾಗಿ ಸೆಣಸಲಿದ್ದಾರೆ. ಪುರುಷರ ಡಬಲ್ಸ್‌ನ ನಿನ್ನೆ ಸಂಜೆ ನಡೆದ ಪೈನಲ್ ಪಂದ್ಯದಲ್ಲಿ ೧೫ನೇ ಶ್ರೇಯಾಂಕದ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಮತ್ತು ಜೋರ್ಡಾನ್ ಥಾಂಪ್ಸನ್ ಜೋಡಿಯ ವಿರುದ್ಧ ಬ್ರಿಟನ್‌ನ ಹೆನ್ರಿ ಪ್ಯಾಟನ್ ಮತ್ತು ಫಿನ್‌ಲ್ಯಾಂಡ್‌ನ ಹ್ಯಾರಿ ಹೆಲಿಯೊವಾರಾ ಜೋಡಿ ಜಯಗಳಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಮಹಿಳೆಯರ ಡಬಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಕೆನಡಾದ ಗ್ಯಾಬ್ರಿಯೆಲಾ ದಬ್ರೊವ್ಸ್ಕಿ ಮತ್ತು ನ್ಯೂಜಿಲೆಂಡ್‌ನ ಎರಿನ್ ರೌಟ್‌ಲಿಫ್ ಜೋಡಿಯ ವಿರುದ್ಧ ನಾಲ್ಕನೇ ಶ್ರೇಯಾಂಕದ ಜೆಕ್ ಗಣರಾಜ್ಯದ ಕಟೆರಿನಾ ಸಿನಿಯಾಕೋವಾ ಮತ್ತು ಅಮೆರಿಕದ ಟೇಲರ್ ಟೌನ್‌ಸೆಂಡ್ ೭-೬, ೭-೬ ಸೆಟ್‌ಗಳಿಂದ ಗೆಲುವು ಸಾಧಿಸಿ ಪ್ರಶಸ್ತಿ ಜಯಿಸಿದರು. ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಪೋಲಿಷ್-ತೈವಾನ್ ಜೋಡಿಯಾದ ಜಾನ್ ಜಿಲಿನ್‌ಸ್ಕಿ ಮತ್ತು ಸೀಹ್ ಸು-ವೀ ಅವರಿಂದು ಮೆಕ್ಸಿಕೋ ಜೋಡಿ ಸ್ಯಾಂಟಿಯಾಗೊ ಗೊನ್ಸಾಲೆಸ್ ಮತ್ತು ಗಿಯುಲಿಯಾನಾ ಓಲ್ಮೊಸ್ ವಿರುದ್ಧ ಸೆಣಸಲಿದ್ದಾರೆ.

**<><*<><>*><>**

ಹರಾರೆಯಲ್ಲಿ ಕಳೆದ ರಾತ್ರಿ ನಡೆದ ಭಾರತ-ಜಿಂಬಾಬ್ವೆ ನಡುವಿನ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಭಾರತ ೧೦ ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದ್ದು, ಸರಣಿಯನ್ನು ತನ್ನದಾಗಿಸಿಕೊಂಡಿದೆ. ಟಾಸ್ ಸೋತು ಮೊದಲ ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೧೫೨ ರನ್ ಮಾಡಿತು. ಗುರಿ ಬೆನ್ನತ್ತಿದ ಭಾರತ, ೧೫.೨ ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ ೧೫೬ ರನ್ ಮಾಡಿತು. ಭಾರತದ ಪರ ಯಶಸ್ವಿ ಜೈಸ್ವಾಲ್ ೫೩ ಎಸೆತಗಳಲ್ಲಿ ಅಜೇಯ ೯೩ ರನ್ ಪಡೆದರೆ, ನಾಯಕ ಶುಭ್‌ಮನ್‌ಗಿಲ್ ೩೯ ಎಸೆತಗಳಲ್ಲಿ ಅಜೇಯ ೫೮ ರನ್ ಗಳಿಸಿದರು. ಇದುವರೆಗಿನ ನಾಲ್ಕು ಪಂದ್ಯಗಳಲ್ಲಿ ಭಾರತ ೩

ಪಂದ್ಯಗಳನ್ನು ಗೆದ್ದಿದ್ದು, ೧ ಪಂದ್ಯ ಜಿಂಬಾಬ್ವೆ ಪರವಾಗಿದೆ. ಈ ಸರಣಿಯ ಐದನೇ ಹಾಗೂ ಅಂತಿಮ ಪಂದ್ಯ ಇಂದು ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೪.೩೦ ಕ್ಕೆ ಆರಂಭವಾಗಲಿದೆ.

**<><*<><>*><>**

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಿನ್ನೆ ನಡೆದ ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನವನ್ನು ೫ ವಿಕೆಟ್‌ಗಳಿಂದ ಸೋಲಿಸಿರುವ ಭಾರತ ತಂಡ ೨೦೨೪ರ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ಕಳೆದುಕೊಂಡು ೧೫೬ ರನ್ ಗಳಿಸಿತು. ಭಾರತದ ಪರ ಅನುರೀತ್ ಸಿಂಗ್ ಮೂರು ವಿಕೆಟ್ ಕಬಳಿಸಿದರು. ಶೋಯೆಬ್ ಮಲಿಕ್ ೩೬ ಎಸೆತಗಳಲ್ಲಿ ೪೧ ರನ್ ಗಳಿಸಿ ಪಾಕಿಸ್ತಾನ್ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ೧೫೭ ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಯುವರಾಜ್ ಸಿಂಗ್ ನೇತೃತ್ವದ ಭಾರತ ತಂಡ, ೧೯.೧ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೧೫೯ ರನ್ ಗಳಿಸಿ ಗೆಲುವಿನ ನಗೆ ಬೀರಿತು. ಅಂಬಟಿ ರಾಯುಡು ಅರ್ಧ ಶತಕ, ಗುರುಕೀರತ್ ಮಾನ್ ೩೪ ರನ್ ಮತ್ತು ಯೂಸುಫ್ ಪಠಾಣ್ ೧೬ ಎಸೆತಗಳಲ್ಲಿ ೩೦ ರನ್ ಗಳಿಸುವ ಮೂಲಕ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಅಂಬಟಿ ರಾಯುಡು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನವಾದರೆ, ಯೂಸುಫ್ ಪಠಾಣ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ **<>*><>**